## ಮಾತು-ಕತೆ

ಬಹಳ ಮಹತ್ವದ ಕವಿಯಾದ ಪ್ರತಿಭಾ ನಂದಕುಮಾರ್ ಅವರ ಕವನ ಸಂಕಲನಕ್ಕೆ 'ಟೀ/ಕಾಫಿ ಕುಡಿವ ಸಮಯದಲ್ಲಿ ಓದೋದಕ್ಕೆ ಲಾಯಕ್ಕಾಗಿರುವ ಪದ್ಯಗಳು' ಅಂತ ಈ ಕಾಲಘಟ್ಟದಲ್ಲಿಯೂ ಹೇಳೋಕಾಗುತ್ತೆ ಅಂತಾದರೆ ನಾವು ಇಂಥ ಪ್ರಶ್ನೆಗಳನ್ನು ಎದುರಾಗಲೇ ಬೇಕಲ್ವಾ? ಸ್ತ್ರೀವಾದ ಅನ್ನುವುದು ಹೆಣ್ಣು–ಗಂಡು ಇಬ್ಬರಿಗೂ ಕಲಿಸಿಕೊಡುವ ಪಾಠಗಳು, ಕೊಡುವ ನಿರ್ದೇಶನ, ಸಂಸ್ಕಾರ ಇವೆಲ್ಲ ಅದು ಒಂದು ಆರೋಗ್ಯಪೂರ್ಣ ಸಮಾಜವನ್ನು ನಿರ್ಮಾಣ ಮಾಡುವ ದಿಕ್ಕಿನಲ್ಲಿ ಬಹಳ ಮಹತ್ವದ್ದು ಎಂದು ನಾನು ತಿಳಿದಿದ್ದೇನೆ.

◆ **ನಿಮ್ಮ ಕೃತಿಗಳ ಶೀರ್ಷಿಕೆಗಳು 'ಸ್ತ್ರೀಮತವನುತ್ತರಿಸಲಾಗದೇ?', 'ನಡುವೆ ಸುಳಿವ ಆತ್ಮ', 'ನಾರಿಕೇಳಾ', 'ಬೆಳಕಿಗಿಂತ ಬೆಳ್ಳಗೆ' ಇವು ಸ್ತ್ರೀ ಸಂಕಥನದ ವಿವಿಧ ಆಯಾಮಗಳನ್ನು ಧ್ವನಿಸುತ್ತವೆ. ಈ ಶೀರ್ಷಿಕೆಗಳನ್ನು ನೀವು ಪ್ರಜ್ಞಾಪೂರ್ವಕವಾಗಿ ಆಯ್ದುಕೊಂಡಿರೋ ಅಥವಾ ಆಶಯದ ನೆಲೆಯಲ್ಲಿ ಮಾತ್ರ ಶೀರ್ಷಿಕೆಯಾಗಿಸಿದಿರೋ?**

ನಾನು ನನ್ನ ಕೃತಿಗಳಿಗೆ ಇಟ್ಟ ಈ ಶೀರ್ಷಿಕೆಗಳೇನಿವೆ ಅವನ್ನು ನಾನು ಒಂದೇ ಗುರಿಯನ್ನು ತಲುಪಲು ಆಯ್ದುಕೊಂಡ ಹಲವು ದಾರಿಗಳು ಅಂತ ತಿಳಿದಿರುವೆ. ನಾವು ಹಲವು ಬಾರಿ ಪ್ರಶ್ನೆಗಳನ್ನು ಕೇಳಬೇಕಾಗುತ್ತೆ. ಎದುರಿಗಿರುವವರಿಗೆ ಮನದಟ್ಟು ಮಾಡಿಕೊಡಬೇಕಾಗುತ್ತೆ. ನಮ್ಮ ಈ ಸೊಲ್ಲನ್ನು ಕೇಳಿಸಿಕೋ ಎಂಬ ಒತ್ತಾಯವನ್ನು ಮಾಡಬೇಕಾಗುತ್ತೆ.

ಹೆಣ್ಣು ಪ್ರಶ್ನೆ ಮಾಡಬಾರದು ಅನ್ನೋದು ಇತ್ತಲ್ಲ ಇಲ್ಲಿ ಎಷ್ಟೋ ವರುಷಗಳ ಕಾಲ. ದ್ರೌಪದಿ ಕೇಳ್ತಾ ಇರುವ ಪ್ರಶ್ನೆ ಇದೆಯಲ್ಲ, ಅದರಲ್ಲಿ ಎಂಥ ಧ್ವನಿಶಕ್ತಿ ಇದೆ ಎಂದರೆ 'ಸ್ತ್ರೀಮತವನುತ್ತರಿಸಲಾಗದೇ?' ಎಂದು ಕೇಳ್ತಾ ಇರುವಲ್ಲಿ ಹೆಣ್ಣು ಕೇಳ್ತಾ ಇರುವ ಆ ಸತ್ಯಗಳಿಗೆ ನಿಮಗೆ ಎದುರಾಗುವುದಕ್ಕೆ ಆಗುವುದಿಲ್ಲ ಅಂತಾದರೆ ನೀವು ಉತ್ತರಿಸುವುದಕ್ಕೆ ಸಿದ್ಧರಿಲ್ಲ, ನೀವು ಉತ್ತರಿಸಬೇಕಾಗಿಲ್ಲ ಎಂದು ತಿಳಿದಿದ್ದೀರಿ ಅಂತಾದರೆ ಇದು ಇಡೀ ಮೌಲ್ಯ ವ್ಯವಸ್ಥೆಯ ಸೋಲು ಕೂಡಾ ಹೌದು. ಅಥವಾ ಪಿತೃಸಂಸ್ಕೃತಿಗೆ ತಾನು ಮಾಡುತ್ತಿರುವ ಅನ್ಯಾಯದ, ತಪ್ಪಿನ ಅರಿವಿದೆ ಎಂದು ಕೂಡಾ ಹೌದು.

ಕುಮಾರವ್ಯಾಸನ ಇದೊಂದೇ ಒಂದು ಹೇಳಿಕೆ ಏನಿದೆ ಅದೇ ಇಡೀ ಮಹಿಳಾ ಸಂಕಥನದ ಘೋಷವಾಕ್ಯ ಕೂಡಾ ಆಗಬಹುದು ಅನಿಸುತ್ತೆ. 'ಉತ್ತರಿಸಲಾಗದೇ ಧರ್ಮಶಾಸ್ತ್ರದೊಳ್' ಅಂತ ಹೇಳ್ತಿರಬೇಕಾದರೆ ಧರ್ಮ, ಶಾಸ್ತ್ರ ಯಾವುದೂ ಹೆಣ್ಣಿನ ಪರವಾಗಿಲ್ಲ. ಯಾವ ಧರ್ಮ ಮತ್ತು ಯಾವ ಶಾಸ್ತ್ರ ಸಮುದಾಯದ ನಡೆಯುವ ದಾರಿಯನ್ನು ನಿರ್ದೇಶಿಸುತ್ತಿದೆಯೋ ಅಲ್ಲಿ ಹೆಣ್ಣಿಗೆ ಯಾವ ಸ್ಥಾನವೂ ಇಲ್ಲ ಅನ್ನೋದನ್ನು ಇದು ಹೇಳ್ತಾ ಇರತ್ತೆ. ಇಂಥ ಪರಮಸತ್ಯವನ್ನು ಕುಮಾರವ್ಯಾಸನಂತಹ ಕವಿ ಅರ್ಥ ಮಾಡಿಕೊಂಡಿದ್ದ ಅನ್ನೋದಿದೆಯಲ್ಲ, ಅದು ಸಾಹಿತ್ಯ ಎನ್ನುವುದು ಯಾವತ್ತೂ ಸತ್ಯದ ವಾರಸುದಾರಿಕೆಯನ್ನು ಎತ್ತಿ ಹಿಡಿಯತ್ತೆ ಅನ್ನೋದನ್ನು ಹೇಳುತ್ತೆ ಮತ್ತು ಆ ಸತ್ಯದಲ್ಲಿ ಗಂಡು ಮುಚ್ಚಿಡಬಯಸುವ ಹಲವು ಸ್ತ್ರೀ ಸತ್ಯಗಳು ಹೊರಗೆ ಬರುತ್ತೆ ಅನ್ನೋದನ್ನೂ ಹೇಳುತ್ತೆ.

'ನಡುವೆ ಸುಳಿವ ಆತ್ಮ' ಅನ್ನುವುದಿದೆಯಲ್ಲ ಅದು ಇನ್ನೊಂದು ಸತ್ಯದ ಅನಾವರಣ. ಯಾವ ಸತ್ಯವನ್ನು ಒಪ್ಪಿಕೊಳ್ಳಲು ಗಂಡು ಮತ್ತು ಹೆಣ್ಣು ಇಬ್ಬರಲ್ಲೂ ಹಿಂಜರಿಕೆ ಇತ್ತೋ ಆ ಹಿಂಜರಿತದ ಸನ್ನಿವೇಶದಲ್ಲಿ, ವಚನ ಚಳವಳಿ ಇಬ್ಬರನ್ನೂ ಎರಡು ಹೆಜ್ಜೆ ಮುಂದೆ ತಂದಿತು. ಈ ಹಿನ್ನೆಲೆಯಲ್ಲಿ ಮತ್ತು ಹೆಣ್ಣಿನ ಹೋರಾಟದ ಆಶಯದ ದೃಷ್ಟಿಯಿಂದ ಆತ್ಮ ಅಮೂರ್ತವಾದ ಸಂಗತಿಯಲ್ಲ, ಬದಲಿಗೆ ಹೆಣ್ಣು–ಗಂಡು ಇಬ್ಬರೂ ಒಂದು ಪರಮ ಸತ್ಯವನ್ನು ಎದುರಾಗುತ್ತಿರುವ ಒಂದು ಕ್ರಮವಾಗಿ ಕಾಣ್ತದೆ.